# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1296
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್
ಉತ್ತರಿಸುವ ದಿನಾಂಕ : 22-08-2025
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಅನುಸೂಚಿತ ಜಾತಿ ಅನುಸೂಚಿತ ಪಂಗಡದ ಸಮುದಾಯಕ್ಕೆ ಸೇರಿದ ಸಾರ್ವಜನಿಕರ ಮೇಲೆ ದಿನದಿಂದ ದಿನಕ್ಕೆ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು) | ಇಲ್ಲ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲೆ ದೌರ್ಜನ್ಯ ತಡೆಯಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989 ನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಸಂಬಂಧ ಪೊಲೀಸ್ ಮತ್ತು ಇತರೇ ಅಧಿಕಾರಿಗಳಿಗೆ ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗುತ್ತಿದೆ. 2025-26 ನೇ ಸಾಲಿನಲ್ಲಿ ದೌರ್ಜನ್ಯ ಪ್ರಕರಣಗಳಲ್ಲಿ ಪರಿಣಾಮಕಾರಿಯಾಗಿ ಕ್ರಮವಹಿಸಲು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ 33 ವಿಶೇಷ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ.<br><br>ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ ಅಧಿನಿಯಮ 1989 ರ ಕಾಯ್ದೆಯಡಿ ದಾಖಲಾದ ಪ್ರಕರಣಗಳ ವಿಚಾರಣೆಗಾಗಿ ಚಾಲ್ತಿಯಲ್ಲಿರುವ 08 ಪ್ರತ್ಯೇಕ ವಿಶೇಷ ನ್ಯಾಯಾಲಯಗಳೊಂದಿಗೆ (Exclusive Special Courts) 03 ವಿಶೇಷ ನ್ಯಾಯಾಲಯ (Special Courts) ಗಳನ್ನೂ ಸಹ ಪ್ರಾರಂಭಿಸಲಾಗಿದೆ. ಒಟ್ಟು 11 ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1989, (ತಿದ್ದುಪಡಿ) ಅಧಿನಿಯಮ 2015 ಮತ್ತು ನಿಯಮಗಳು 1995 (ತಿದ್ದುಪಡಿ) ನಿಯಮಗಳ 2016 ಮತ್ತು ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಬಗ್ಗೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. |
| ಆ) | ಕೊಪ್ಪಳ ಜಿಲ್ಲೆಯಲ್ಲಿ 2024-25ನೇ ಸಾಲಿನಿಂದ ಇಲ್ಲಿಯವರೆಗೆ ದಾಖಲಾಗಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಎಷ್ಟು ; | ಕೊಪ್ಪಳ ಜಿಲ್ಲೆಯಲ್ಲಿ 2024-25ನೇ ಸಾಲಿನಲ್ಲಿ 64 ಪ್ರಕರಣಗಳು ಮತ್ತು 2025-26ನೇ ಸಾಲಿನಲ್ಲಿ ದಿನಾಂಕ:11-08-2025 ರವರೆಗೆ 37 ಪ್ರಕರಣಗಳು ದಾಖಲಾಗಿರುತ್ತವೆ. |

| | | |
|---|---|---|
| ಇ) | ದೌರ್ಜನ್ಯಕ್ಕೆ ಒಳಗಾದ ಎಸ್.ಸಿ/ ಎಸ್.ಟಿ ಸಮುದಾಯದ ವ್ಯಕ್ತಿಗಳ ಸಂಖ್ಯೆ ಎಷ್ಟು; | ಕಳೆದ 2 ವರ್ಷಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ಎಸ್.ಸಿ/ಎಸ್.ಟಿ ಸಮುದಾಯದ ವ್ಯಕ್ತಿಗಳ ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ವರ್ಷ | ಪ.ಜಾತಿ | ಪ.ಪಂ. | ಒಟ್ಟು |
|---|---|---|---|---|
| 1 | 2024-25 | 132 | 49 | 181 |
| 2 | 2025-26 | 96 | 31 | 127 |

| | | |
|---|---|---|
| ಈ) | ದೌರ್ಜನ್ಯಕ್ಕೆ ಒಳಗಾದ ಎಸ್.ಸಿ/ ಎಸ್.ಟಿ ಸಮುದಾಯದ ವ್ಯಕ್ತಿಗಳಿಗೆ ಪಾವತಿಸಿರುವ ಪರಿಹಾರ ಧನ ಎಷ್ಟು? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) | ದೌರ್ಜನ್ಯಕ್ಕೆ ಒಳಗಾದ ಎಸ್.ಸಿ/ಎಸ್.ಟಿ ಸಮುದಾಯದ ವ್ಯಕ್ತಿಗಳಿಗೆ ಪಾವತಿಸಿರುವ ಪರಿಹಾರ ಧನದ ವಿವರ ಈ ಕೆಳಕಂಡಂತಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ತಾಲ್ಲೂಕು | ಪ್ರಕರಣಗಳ ಸಂಖ್ಯೆ | ಮಂಜೂರಿಸಿದ ಪರಿಹಾರಧನ |
|---|---|---|---|---|
| 1 | 2024-25 | ಕೊಪ್ಪಳ | 22 | 28.35 |
| | | ಗಂಗಾವತಿ | 29 | 55.10 |
| | | ಕನಕಗಿರಿ | 10 | 12.00 |
| | | ಕಾರಟಗಿರಿ | 92 | 100.00 |
| | | ಕುಷ್ಟಗಿ | 16 | 23.25 |
| | | ಕುಕನೂರು | 01 | 1.50 |
| | | ಯಲಬುರ್ಗಾ | 11 | 21.25 |
| | | **ಒಟ್ಟು** | **181** | **241.45** |

| ಕ್ರ. ಸಂ | ವರ್ಷ | ತಾಲ್ಲೂಕು | ಪ್ರಕರಣಗಳ ಸಂಖ್ಯೆ | ಮಂಜೂರಿಸಿದ ಪರಿಹಾರಧನ |
|---|---|---|---|---|
| 2 | 2025-26 | ಕೊಪ್ಪಳ | 38 | 22.75 |
| | | ಗಂಗಾವತಿ | 22 | 16.75 |
| | | ಕನಕಗಿರಿ | 01 | 0.25 |
| | | ಕಾರಟಗಿರಿ | 37 | 18.00 |
| | | ಕುಷ್ಟಗಿ | 13 | 10.75 |
| | | ಕುಕನೂರು | 11 | 6.50 |
| | | ಯಲಬುರ್ಗಾ | 05 | 5.00 |
| | | **ಒಟ್ಟು** | **127** | **80.00** |

**ಸಂಖ್ಯೆ: ಸಕಇ 693 ಪಕವಿ 2025**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**